(6ನೇ ಪುಟದಿಂದ)

ಬಿಡುವ ಬಳ್ಳಿಗಳು ಹೆಸರೇ ಸೂಚಿಸುವಂತೆ ನಿಮ್ಮ ಭಾವೋದ್ವೇಗವನ್ನು ಜಾಗೃತಗೊಳಿಸುತ್ತವೆ. ಫ್ಯಾಷನ್ ಫ್ರೂಟ್ ಎಂದೇ ಪ್ರಸಿದ್ಧವಾಗಿರುವ ಈ ಹಣ್ಣುಗಳಿಂದ ದೊರಕುವ ವಿಟಮಿನ್ ಸಿ ಯುಕ್ತ ರಸಕ್ಕೆ ವಿದೇಶಗಳಲ್ಲಿ ಅತೀ ಹೆಚ್ಚಿನ ಬೇಡಿಕೆ. ಈ ರಸವನ್ನು ಹೃದಯ ಸಂಬಂಧಿ ಕಾಯಿಲೆಗಳನ್ನು ದೂರ ಮಾಡಲೂ ಬಳಸಲಾಗುತ್ತದೆ. ಇದರ ಹಣ್ಣುಗಳು ಬಹಳ ಹುಳಿಯಿದ್ದು ಹಳದಿ ಬಣ್ಣ ಹೊಂದಿರುವುದರಿಂದ ಜ್ಯೂಸ್ ಮಾಡಲು ಕೃತಕ ಬಣ್ಣದ ಅವಶ್ಯಕತೆಯೇ ಕಳೆದುಕೊಳ್ಳುವುದಿಲ್ಲ.

ಪ್ಯಾಸಿಫ್ಲೋರಾ ಲಾರಿಫೋಲಿಯ ಮೂಲತಃ ಅಮೆರಿಕೆಯದ್ದು. ಜಮೈಕಾದಲ್ಲಿ ಹನಿ ಸಕಲ್ ಎಂದೂ ಹೆಸರಿದೆ. ಗಡುತರವಾದ ಬಳ್ಳಿಯಾಗಿದ್ದು ನೀಲಿ–ನೇರಳೆ ಬಣ್ಣ ಹೊಂದಿರುವ ಸುವಾಸಿತ ಹೂವುಗಳು. ಈ ಹೂಗಳು ಬೆಳಗಿನ ಹೊತ್ತು ಗಾಢ ಸುವಾಸನೆ ನೀಡುತ್ತದೆ.

ಪ್ಯಾಸಿಫ್ಲೋರಾ ಜಾತಿಯಲ್ಲಿ ಸುಮಾರು 300 ಪ್ರಭೇದಗಳಿವೆ. ಕೆಲವು ಸಣ್ಣಮರಗಳು, ಹೊದರುಗಳು ಮತ್ತು ಕೆಲವು ದಾರವುಳ್ಳ ಬಳ್ಳಿಗಳು. ಈ



ಪ್ಯಾಸಿಫ್ಲೋರಾ ರೆಸಿಮೋಸ

ಇಲ್ಲ. ತಿರುಳು ಕೂಡಾ ಸುವಾಸಿತವಾಗಿದೆ. ಆದ್ದರಿಂದ ಶರಬತ್‌ಗೆ ಏಲಕ್ಕಿಯ ಅವಶ್ಯಕತೆಯೂ ಇಲ್ಲ. ಕಾವೇರಿ ಎನ್ನುವ ತಳಿಯೂ ಫ್ಯಾಷನ್ ಫ್ರೂಟ್‌ನಲ್ಲಿ ಲಭ್ಯವಿದೆ.

ಊಟಿ, ಕೊಡೈಕೆನಾಲ್ ಪ್ರದೇಶಗಳಲ್ಲಿ ಮತ್ತೊಂದು ಪ್ರಭೇದ ಕಂಡು–ಬಂದಿದ್ದು ಅದರ ಹಣ್ಣುಗಳಂತೂ ಸಿಹಿ ಸಿಹಿ. ಅಲ್ಲಿ ದೊರಕುವ ಹಣ್ಣುಗಳು ಮತ್ತು ತಿರುಳು ಬಿಳಿ ಬಣ್ಣವನ್ನು ಹೊಂದಿದ್ದು ಬಹಳಷ್ಟು ಬೀಜಗಳನ್ನು ಹೊಂದಿರುತ್ತವೆ. ಬೀಜದೊಂದಿಗೆ ತಿರುಳನ್ನು ಹೊಂದಿರುತ್ತವೆ. ಬೀಜ–ದೊಂದಿಗೇ ತಿರುಳನ್ನು ಚಪ್ಪರಿಸಿ ಗುಳುಂ ಮಾಡಬೇಕು.

ಈಗ ನನ್ನ ಮೆಚ್ಚಿನ ಬಳ್ಳಿಯ ವಿಷಯಕ್ಕೆ ಬರೋಣ. ಕಡು ಕೆಂಪು ಬಣ್ಣದ ಈ ಬಳ್ಳಿಯ ಹೆಸರು ಪ್ಯಾಸಿಫ್ಲೋರಾ ರೆಸಿಮೋಸ. ಮೂಲತ: ಬ್ರೆಜಿಲ್ ದೇಶದ್ದಾಗಿದ್ದು ಎತ್ತರಕ್ಕೆ ಬೆಳೆಯುವ ಹಂಬು. ಬಿಳಿಯ ಕಿರೀಟದ ದಾರದ ಎಳೆಗಳನ್ನು ಹೊಂದಿದ್ದು ಮೇಲ್ಭಾಗದಲ್ಲಿ ಬಿಳಿ ಹಾಗೂ ತಳಭಾಗದಲ್ಲಿ ನೀಲಿಬಣ್ಣವನ್ನು ಹೊಂದಿರುತ್ತದೆ. ಎಲೆ ದಟ್ಟ ಹಸಿರಾಗಿದ್ದು ತ್ರಿಶೂಲದಂತೆ ಕಂಡು ಬರುತ್ತದೆ. ಈ ಬಳ್ಳಿಯು ಗೋಡೆಯ ಮೇಲೆ ಅಥವಾ ಕಮಾನುಗಳ ಮೇಲೆ ಹಬ್ಬಿಸಿದಾಗ ಹೆಚ್ಚು ಚೆಲುವಾಗಿ ಕಾಣಿಸುತ್ತದೆ.

ಸಾಮಾನ್ಯವಾಗಿ ಈ ಬಳ್ಳಿ ಹೂ ಬಿಡುವುದು ಬೇಸಿಗೆ ಹಾಗೂ ಮಳೆಗಾಲ–ದಲ್ಲಿ. ಗೂಟಿ ಮಾಡುವಿಕೆ ಅಥವಾ ಬೀಜಗಳಿಂದ ಗಿಡಗಳನ್ನು ವೃದ್ಧಿ ಮಾಡಬಹುದು. ಕೆಲವೊಮ್ಮೆ ವರ್ಷವಿಡೀ ಹೂವುಗಳನ್ನು ಕಾಣಬಹುದು. ಈ ಬಳ್ಳಿಗೆ ಸುಣ್ಣದಂಶ ಹೆಚ್ಚಿರುವ ಮಣ್ಣು ಹಾಗೂ ತೇವಭರಿತ ಮಣ್ಣು ಅತಿ ಮುಖ್ಯ. ಈ ಬಳ್ಳಿಗಳಲ್ಲಿ ಹೂಗಳು ಬಿಡುವುದು ಮುಗಿದ ನಂತರ ಆಗಾಗ್ಗೆ ಸವರುವಿಕೆ ಮಾಡುವುದರಿಂದ ಬಳ್ಳಿಯು ಸುಸ್ಥಿತಿಯಲ್ಲಿದ್ದು ಆಕಾರವನ್ನು ಬಳ್ಳಿಗಳ ಹೂವಿನ ರಚನೆಯೇ ಅದ್ಭುತ. 5 ಭಾಗಗಳಿರುವ ಪುಷ್ಪಪತ್ರನಾಳ ಹಾಗೂ ಪುಷ್ಪಪತ್ರಗಳು. ದಳಗಳ ಸಂಖ್ಯೆ ಐದು. ದಳಗಳ ಮಧ್ಯದಲ್ಲಿ ಒಂದು ಅಥವಾ ಹಲವು ದಾರದಂತೆ ಇರುವ ವರ್ತುಲಾಕಾರದ ಉಂಗುರಗಳು. ಈ ಉಂಗುರಗಳನ್ನು ಕಿರೀಟ (ಕರೋನ) ಎಂದೂ ಕರೆಯಲಾಗುತ್ತದೆ. ಹೊರ ಉಂಗುರವೇ ಹೂವಿನ ವರ್ಣರಂಜಿತ ಪ್ರಮುಖ ವಲಯ.

ಈ ಉಂಗುರಗಳು ಕ್ರಿಸ್ತನ ಮುಳ್ಳು ಕಿರೀಟವನ್ನೂ, ಮಧ್ಯದ ಶಲಾಕೆ ಅವನನ್ನು ಶಿಲುಬೆಗೇರಿಸಲು ನೆಟ್ಟ ಮೊಳೆಗಳೆಂದು, ಅಂಡಕೋಶ ಪಾನ ಪಾತ್ರೆಯೆಂದೂ, 5 ಕೇಸರಗಳು ಅವನನ್ನು ಶಿಲುಬೆಗೇರಿಸಿದಾಗ ಆದ ಗಾಯಗಳೆಂದೂ, ಬಿಳಿಯ ದಳಗಳು (ಒಂದು ಪ್ರಭೇದದಲ್ಲಿ) ಆತನ ನಿಷ್ಕಳಂಕತ್ವದ ಸೂಚಕವೆಂದೂ, 10 ದಳಗಳು ಕ್ರಿಸ್ತನನ್ನು ಶಿಲುಬೆಗೆ ಏರಿಸಿದಾಗ ಇದ್ದ 10 ಶಿಷ್ಯರೆಂದೂ, ನೀಲಿ ಜುಮುಕಿ ಹೂವಿನ ಆಕಾಶ ನೀಲಿಯು ಕ್ರಿಸ್ತನ ತಾಯಿ ಮರಿಯಮ್ಮಳ ನೀಲ ಕವಚವೆಂದೂ ಪರಿಗಣಿಸಲಾಗಿದೆ.

ಫ್ಯಾಷನ್ ಗಿಡವನ್ನು ಸಣ್ಣ ಎಳೆಯ ರೆಂಬೆಗಳಿಂದ, ವಸಂತ ಕಾಲದಲ್ಲಿ 15 ಸೆಂ.ಮೀ. ಉದ್ದದ ಹಳೆಯ ಕಾಂಡದ ಸ್ವಲ್ಪ ಹಿಮ್ಮಡಿಯಿರುವಂತೆ ತುಂಡು–ಗಳನ್ನು ಮರಳು ತುಂಬಿರುವ ಸಣ್ಣ ಕುಂಡಗಳಲ್ಲಿ ಬಿಡಿಬಿಡಿಯಾಗಿ ನೆಟ್ಟು ಬೇರು ಬಿಡಿಸಿ ವೃದ್ಧಿ ಮಾಡಲಾಗುತ್ತದೆ. ಈ ಬಳ್ಳಿಗಳನ್ನು ಸೂರು, ತಾರಸಿ, ಗೋಡೆ ಮೇಲೆ, ಕಮಾನುಗಳ ಮೇಲೆ, ದೊಡ್ಡ ಕುಂಡಗಳಲ್ಲಿ ಬೆಳೆಸಬಹುದು. ಬೇರುಗಳನ್ನು ಆಗಾಗ್ಗೆ ಸವರಬೇಕು. ಎಲ್ಲಾ ಬಗೆಯ ಮಣ್ಣುಗಳಲ್ಲೂ ನಿರಾತಂಕವಾಗಿ ಬೆಳೆಯಬಲ್ಲುದು. ಹೂ ಮುಗಿದ ಮೇಲೆ ಇದನ್ನು ತೆಳು ಮಾಡಬೇಕು. ಆಗ ಹೊಸ ಚಿಗುರುಗಳು ಒಡೆದು ಮುಂದಿನ ವರ್ಷ ಹೂವು ಬಿಡಲು ಅನುಕೂಲವಾಗುತ್ತದೆ.